ತುರುವೇಕೆರೆ ತಾಲ್ಲೂಕಿನ ರಸ್ತೆ ಕಾಮಗಾರಿ

1241(2019) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ.(ಅಣ್ಣಯ್ಯ)) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಈ ಸಾಲಿನಲ್ಲಿ ನಬಾರ್ಡ ವತಿಯಿಂದ ಆಯ್ಕೆಯಾಗಿರುವ ತುರುವೇಕೆರೆ ತಾಲ್ಲೂಕಿನಲ್ಲಿ ರಸ್ತೆಗಳ ಕಾಮಗಾರಿಗಳು ಯಾವುದು?

ಆ) ಈ ತಾಲ್ಲೂಕಿನ ಗಂಗನಹಳ್ಳಿ, ಮಾವಿನಹಳ್ಳಿ, ಕೋಳಗಟ್ಟಿ, ಪಿ.ಕಲ್ಲಹಳ್ಳಿ ರಸ್ತೆಗಳು ತುಂಬಾ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ರಸ್ತೆಗಳ ದುರಸ್ತಿಯನ್ನು ಈ ಸಾಲಿನಲ್ಲಿ ತೆಗೆದುಕೊಂಡು ಪೂರ್ಣಗೊಳಿಸಲಾಗುವುದೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಪ್ರಸಕ್ತ ಸಾಲಿನಲ್ಲಿ ನಬಾರ್ಡ್ ನೆರವಿನಡಿ ಕೈಗೊಳ್ಳಲು ಯಾವುದೇ ಕಾಮಗಾರಿಯನ್ನು ಗುರುತಿಸಲಾಗಿರುವುದಿಲ್ಲ.

ಆ) ಈ ಹಳ್ಳಿಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯು ಹಳ್ಳಿ ರಸ್ತೆಯಾಗಿದ್ದು, ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ.

ಇ) ಈ ರಸ್ತೆಯ ದುರಸ್ತಿಯನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಕೈಗೊಳ್ಳಬೇಕಿರುತ್ತದೆ.

ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವೆ, ಕೊರಟಕೆರೆ ಹಾಗೂ ಕಿಟ್ಟರ ಹಳ್ಳಿಗಳಲ್ಲಿ ವಿದ್ಯುತ್ ಸ್ಥಾವರಗಳ ಸ್ಥಾಪನೆ

1244(1958) ಶ್ರೀ ಮಹಾಲಿಂಗಪ್ಪ ಬಿ.ಎನ್.(ಶಿಕಾರಿಪುರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವ ಕೊರಟಕೆರೆ ಹಾಗೂ ಕಿಟ್ಟರಹಳ್ಳಿಗಳಲ್ಲಿ ಉಪ ವಿದ್ಯುತ್ ಸ್ಥಾವರಗಳು ಮಂಜೂರಾಗಿದೆಯೋ?

ಆ) ಇವುಗಳ ಸ್ಥಾಪನೆಗೆ ಜಮೀನು ಮಂಜೂರು ಆಗಿದೆಯೇ?

ಇ) ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಬಸವರಾಜ್ ಪಾಟೀಲ್(ಇಂಧನ ರಾಜ್ಯ ಸಚಿವರು):

ಅ) ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವದಲ್ಲಿ ಉಪ ವಿದ್ಯುತ್ ಸ್ಥಾವರವು ಮಂಜೂರಾಗಿರುವುದಿಲ್ಲ.

ಇದೇ ತಾಲ್ಲೂಕಿನ ಕೊರಟಕೆರೆ ಮತ್ತು ಕಿಟ್ಟರಹಳ್ಳಿಗಳಲ್ಲಿ 110:11 ಕೆ.ವಿ. ಉಪವಿದ್ಯುತ್ ಸ್ಥಾವರಗಳ ಸ್ಥಾಪನೆಯ ಪ್ರಸ್ತಾವನೆಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ತಾಂತ್ರಿಕ ಸಮಿತಿಯು ಅನುಕ್ರಮವಾಗಿ ಅಕ್ಟೋಬರ್ 2001 ಮತ್ತು ಫೆಬ್ರವರಿ 2002ರಲ್ಲಿಅನುಮೋದನೆ ನೀಡಿರುತ್ತದೆ.

ಆ) ಇಲ್ಲ

ಇ) ಕೊರಟಕೆರೆ ಮತ್ತು ಕಿಟ್ಟರಹಳ್ಳಿಗಳಲ್ಲಿ ಉದ್ದೇಶಿತ ಉಪ ವಿದ್ಯುತ್ ಸ್ಥಾವರಗಳ ಸ್ಥಾಪನೆಗೆ ಬೇಕಾಗುವ ಸ್ಥಳವನ್ನು ಗುರುತಿಸಲಾಗಿದ್ದು, ಭೂ ಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ. ಬಳ್ಳಿಗಾವದಲ್ಲಿ ಉಪ ವಿದ್ಯುತ್ ಸ್ಥಾವರವು ಮಂಜೂರಾಗದೇ ಇರುವುದರಿಂದ, ಜಮೀನು ಗುರುತಿಸುವ ಮತ್ತು ಸ್ವಾಧೀನಪಡಿಸಿಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.